(246)

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.167/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 25.4.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:-** ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ, ಹೊಸಕೋಟೆ ತಾಲ್ಲೂಕು ಚಿಕ್ಕಹೊರಟಿ ಗ್ರಾಮದ ಸರ್ವೆ ನಂ.168 ಕ್ಷೇತ್ರ 4 ಎಕರೆ ಜಮೀನಿನ ಕಬ್ಜೆಯನ್ನು ದೂರುದಾರರ ವಶಕ್ಕೆ ಬಿಟ್ಟುಕೊಡಲು ಸೂಕ್ತಕ್ರಮಕೈಗೊಳ್ಳುವಂತೆ ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ನಾರಾಯಣಪ್ಪ, ದೊಡ್ಡಕೊರಟಿ ಗ್ರಾಮ, ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ತಹಶೀಲ್ದಾರ್, ಹೊಸಕೋಟೆ ಮತ್ತು ಇತರ ಮೂವರು ಕಂದಾಯ ಅಧಿಕಾರಿಗಳು, (ಇನ್ನು ಮುಂದೆ 1ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಹೊಸಕೋಟೆ ತಾಲ್ಲೂಕು ಚಿಕ್ಕಕೊರಟಿ(ದಿಣ್ಣೆ) ಗ್ರಾಮದ ಸರ್ವೆ ನಂ.168 ಕ್ಷೇತ್ರ 4 ಎಕರೆ ಜಮೀನು ದೂರುದಾರರ ತಾತ ಪಾಪಯ್ಯನವರಿಗೆ ಸರ್ಕಾರದಿಂದ ಇನಾಂತಿಯಾಗಿ ಮಂಜೂರು ಮಾಡಲಾಗಿರುತ್ತದೆ. ಈ ಜಮೀನಿಗೆ ಕಂದಾಯ ಪಾವತಿಸಿದ್ದು, ಕಂದಾಯ ದಾಖಲೆಗಳು ದೂರುದಾರರ ವಂಶಸ್ಥರ ಹೆಸರಿನಲ್ಲಿರುತ್ತವೆ. ದೂರುದಾರರ ವಂಶಸ್ಥರು ಕಾಲವಾದ ನಂತರ ಅವರ ವಾರಸುದಾರರಾದ ದೂರುದಾರರು ಈ ಜಮೀನನ್ನು ಅನುಭವಿಸುತ್ತಿದ್ದು, ಆದರೆ ಎದುರುದಾರರು ಸ್ಥಳೀಯ ಸವರ್ಣಿಯರ ಒತ್ತಡಕ್ಕೆ ಮಣಿದು, ಮೇಲ್ಕಾಣಿಸಿದ ಜಮೀನಿನ ದಾಖಲೆಗಳನ್ನು ಸವರ್ಣೀಯರ ಹೆಸರಿಗೆ ತಿದ್ದಿರುತ್ತಾರೆ. ದೂರುದಾರರು ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ಸಂ.ಎಲ್.ಎನ್.ಡಿ.ಎಸ್.ಸಿ.ಎಸ್.ಟಿ/9/83-84ರಂತೆ ದಾಖಲಿಸಿದ್ದ ಪ್ರಕರಣದಲ್ಲಿ ದೂರುದಾರರ ಪರವಾಗಿ

(245)

ಆದೇಶವಾಗಿರುತ್ತದೆ. ಅದೇ ರೀತಿ ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದ ಆದೇಶ ಸಂ. ಸಂ.ಎಲ್.ಎನ್.ಡಿ.ಎಸ್.ಸಿ.ಎಸ್.ಟಿ/13/89--90ರ ಪ್ರಕರಣದಲ್ಲಿ ದೂರುದಾರರಂತೆ ಆದೇಶವಾಗಿರುತ್ತದೆ. ಆನಂತರ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಂ: 14758/1990ರ ಪ್ರಕರಣದಲ್ಲಿಯೂ ದೂರುದಾರರಂತೆ ಆದೇಶವಾಗಿರುತ್ತದೆ. ಇಷ್ಟೆಲ್ಲಾ ಆದೇಶಗಳಿದ್ದರೂ ಎದುರುದಾರರು ಅವುಗಳನ್ನು ಪಾಲಿಸದೆ, ಜಮೀನನ್ನು ಬಲವಂತವಾಗಿ ವಶಪಡಿಸಿಕೊಂಡು ಸವರ್ಣೀಯರ ಹೆಸರಿನಲ್ಲಿ ಖಾತೆ ಮಾಡಿರುವುದರಿಂದ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ತಮಗೆ ನ್ಯಾಯದೊರಕಿಸಿಕೊಡಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1 ರಿಂದ 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕೊರಟಿ ಗ್ರಾಮದ ಸರ್ವೆ ನಂ.168 ಮೂಲಕ ಸರ್ಕಾರಿ ಗೋಮಾಳ ಜಮೀನಾಗಿದ್ದು, ಒಟ್ಟು 128 ಎಕರೆ 39 ಗುಂಟೆ ಜಮೀನಿರುತ್ತದೆ. ಇದರಲ್ಲಿ ಸುಮಾರು 48 ಜನರಿಗೆ ಖಾತೆಯಾಗಿ ಪಹಣಿ ದಾಖಲಾಗಿರುವುದು ಕಂಡುಬರುತ್ತದೆ. ಆದರೆ ದರಕಾಸ್ತು ಪೋಡಿ ಮಾಡಲು ನಮೂನೆ 1 ರಿಂದ 5ನ್ನು ಭರ್ತಿಮಾಡಿರುವುದನ್ನು ಪರಿಶೀಲಿಸಲಾಗಿ ಅರ್ಜಿದಾರರು ಕೋರಿರುವ ಸರ್ವೆ ನಂ.168/ಪಿ-1 ಕ್ಷೇತ್ರ 4 ಎಕರೆ ಜಮೀನು ಮುನಿಯಪ್ಪ, ವೆಂಕಟರಮಣಪ್ಪ, ಹನುಮಂತಪ್ಪ, ಚಿಕ್ಕಚೆನ್ನಪ್ಪ, ನಾರಾಯಣಪ್ಪ, ಮುನಿವೆಂಕಟಪ್ಪ ಮತ್ತು ನಾರಾಯಣಸ್ವಾಮಿ ಹೆಸರುಗಳಿಗೆ ಜಂಟಿ ಖಾತೆಯಾಗಿ ಪಹಣಿಯಲ್ಲಿ ದಾಖಲಾಗಿರುತ್ತದೆ. ಆದರೆ ಮೂಲ ಮಂಜೂರಿದಾರರಾದ ಪಾಪಯ್ಯ ಅವರಿಗೆ ಸಂಬಂಧಿಸಿದ ಮಂಜೂರಿ ಕಡತ ಲಭ್ಯವಿರುವುದಿಲ್ಲ. ಮೇಲ್ಕಂಡ ಪಹಣಿಯಲ್ಲಿ ಉಚ್ಚ ನ್ಯಾಯಾಲಯದ ಆದೇಶ ಸಂ.ರಿಟ್ ಸಂ. 38062/1995 ದಿ.28.10.1996ರಂತೆ ಎಂ.ಆರ್.16/96-97 ರಂತೆ ಖಾತೆಯಾಗಿರುವುದು ಕಂಡುಬರುತ್ತದೆ. ದೂರುದಾರರು ಪೋಡಿ ಮಾಡಲು ಅರ್ಜಿ ನೀಡಿದ್ದು, ಇದಕ್ಕೆ ಸಂಬಂಧಪಟ್ಟಂತೆ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮಲೆಕ್ಕಾಧಿಕಾರಿಗಳು ದಿ.20.2.2014ರಂದು ಸರ್ವೆ ಶಾಖೆಗೆ ಅರ್ಜಿ ರವಾನಿಸಿ, ನಕ್ಷೆ ತಯಾರಿಸಲು ಸೂಚಿಸಿರುತ್ತದೆ. ಪೋಡಿ ಮಾಡುವ ಬಗ್ಗೆ 1 ರಿಂದ 5 ತಯಾರಿಸಿ ಉಪವಿಭಾಗಾಧಿಕಾರಿಗಳ ಅನುಮೋದನೆಗೆ ಸಲ್ಲಿಸಲಾಗಿರುತ್ತದೆ. ಅದು ಪೂರ್ಣಗೊಂಡನಂತರ ಕಾನೂನುರೀತ್ಯಾ ಕ್ರಮ ಜರುಗಿಸಲಾಗುತ್ತದೆ. ಆದರೆ ದೂರುದಾರರು ಹದ್ದುಬಸ್ತು ಮಾಡಲು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ದೂರುದಾರರು ಆಪಾದಿಸಿರುವಂತೆ ಅವರ ಜಮೀನಿನ ಕಂದಾಯ ದಾಖಲೆಯನ್ನು

ಸವರ್ಣೀಯರ ಹೆಸರಿನಲ್ಲಿ ತಿದ್ದಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಈ ಪ್ರಕರಣದಲ್ಲಿ ಮಾನ್ಯ ಉಪವಿಭಾಗಾಧಿಕಾರಿಗಳು ದೊಡ್ಡಬಳ್ಳಾಪುರ ಅವರು ವರದಿ ಸಲ್ಲಿಸಿದ್ದು, ಅದರಲ್ಲಿ ಪಾಪಯ್ಯನವರಿಗೆ 4 ಎಕರೆ ಜಮೀನು ದಿ.24.9.1952ರಲ್ಲಿ ಮಂಜೂರಾಗಿರುತ್ತದೆ. ಈ 4 ಎಕರೆ ಜಮೀನನ್ನು ಪಾಪಯ್ಯನ ಮಕ್ಕಳು ಕ್ರಮವಾಗಿ ತಿಮ್ಮಪ್ಪ-1.13 ಎಕರೆ, ಅಪ್ಪಾಜಪ್ಪ- 1.14 ಎಕರೆ, ನಂಜಪ್ಪ 1.13 ಎಕರೆ ಕ್ರಯಮಾಡಿರುವುದು ಕಂಡುಬರುತ್ತದೆ. ಆನಂತರ ಮೂಲ ಮಂಜೂರುದಾರರು ಪಿಟಿಸಿಎಲ್ ಕಾಯ್ದೆಯಡಿ ಕ್ರಯ ರದ್ದುಪಡಿಸುವಂತೆ ಮಾನ್ಯ ಉಪವಿಭಾಗಾಧಿಕಾರಿಗಳ ಆದೇಶ ಸಂ.ಎಲ್.ಎನ್.ಡಿ.ಎಸ್.ಸಿ.ಎಸ್.ಟಿ.9/83-84 ದಿ. 30.8.1989ರಂದು ಆದೇಶ ಹೊರಡಿಸಿ ನಂಜಪ್ಪ ಅವರಿಗೆ ಮಾಡಿರುವ ಕ್ರಯವನ್ನು ಕ್ರಮಬದ್ಧವೆಂದು ಪರಿಗಣಿಸಿ ಉಳಿದ 2.27 ಎಕರೆಯನ್ನು ಮೂಲಮಂಜೂರಿದಾರ ಪಾಪಯ್ಯನವರ ವಂಶಸ್ಥರಿಗೆ ಹಿಂದಿರುಗಿಸಲು ಆದೇಶಿಸಿರುತ್ತಾರೆ. ಈ ಆದೇಶ ಪ್ರಶ್ನಿಸಿ ಜಿಲ್ಲಾಧಿಕಾರಿಗಳ ಪ್ರಕರಣ ಸಂ.ಎಲ್. ಎನ್.ಡಿ.ಎಸ್.ಸಿ.ಎಸ್.ಟಿ. 14/89-90ರಂತೆ ಮಾನ್ಯ ಉಪವಿಭಾಗಾಧಿಕಾರಿಗಳ ಆದೇಶವನ್ನು ಎತ್ತಿಹಿಡಿದು ಮೇಲ್ಮನವಿ ವಜಾಕರಿಸಿರುತ್ತದೆ. ಈ ಆದೇಶದ ವಿರುದ್ಧ ರಿಟ್ ಪಿಟಿಷನ್ ಸಂ.14758/1990 ಮೇಲ್ಮನವಿದಾರರ ಮನವಿಯನ್ನು ತಿರಸ್ಕರಿಸಿರುತ್ತಾರೆ. ಆದರೆ ಮೇಲ್ಮನವಿದಾರರ ಕೋರಿಕೆಯಂತೆ ಬೆಳೆ ಕಟಾವು ಆದ ನಂತರ ಮೇ 1993 ಅಂತ್ಯದೊಳಗೆ ಪ್ರತಿವಾದಿಗಳಿಗೆ ಜಮೀನು ಬಿಟ್ಟುಕೊಡುವಂತೆ ಆದೇಶಿಸಿರುತ್ತಾರೆ. ಆದರೆ ಪ್ರತಿವಾದಿಗಳು ಜಮೀನು ಬಿಟ್ಟುಕೊಡದ ಕಾರಣ ದೂರುದಾರರ ತಂದೆ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ.38062/1995 ದಾಖಲಿಸಿದ್ದು, ಅದರಲ್ಲಿ ಜೂನ್ 1997ರ ಒಳಗಾಗಿ ಜಮೀನು ಸ್ವಾಧೀನ ಬಿಟ್ಟುಕೊಡುವಂತೆ ಆದೇಶ ನೀಡಲಾಗಿರುತ್ತದೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

6. ಈ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ದೂರುದಾರರು ಗೌರವಾನ್ವಿತ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ: 38062/1995ರ ದಿ.28.10.1996 ಆದೇಶದಲ್ಲಿ ಜನವರಿ 1997ರೊಳಗಾಗಿ ದೂರಿನಲ್ಲಿ ನಮೂದಿಸಿರುವ ಜಮೀನಿನ ಕಬ್ಜೆಯನ್ನು ದೂರುದಾರರಿಗೆ ಬಿಟ್ಟುಕೊಡಬೇಕೆಂದು ಆದೇಶ

243

ನೀಡಲಾಗಿತ್ತು. ಆದರೆ ಇದುವರೆಗೆ ಆ ಜಮೀನನ್ನು ತಮಗೆ ಬಿಟ್ಟಿಕೊಟ್ಟಿರುವುದಿಲ್ಲವೆಂದು ದೂರುದಾರರು ತಿಳಿಸಿರುತ್ತಾರೆ. ಗೌರವಾನ್ವಿತ ಉಚ್ಚ ನ್ಯಾಯಾಲಯದ ಆದೇಶವಿದ್ದರೂ ಸಹಾ ಜಮೀನಿನ ಸ್ವಾಧೀನತೆ ದೂರುದಾರರಿಗೆ ದೊರಕಿರುವುದಿಲ್ಲ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಹೊಸಕೋಟೆ ತಾಲ್ಲೂಕು ಚಿಕ್ಕಹೊರಟಿ ಗ್ರಾಮದ ಸರ್ವೆ ನಂ.168 ಕ್ಷೇತ್ರ 4 ಎಕರೆ ಜಮೀನಿನ ಕಬ್ಜೆಯನ್ನು ದೂರುದಾರರ ವಶಕ್ಕೆ ಬಿಟ್ಟುಕೊಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 25/4/17.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]

**ಉಪಲೋಕಾಯುಕ್ತರು,**

**ಕರ್ನಾಟಕ ರಾಜ್ಯ.**

25/4